1008

(5)

ಕರ್ನಾಟಕ ಸರಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ/ಕಂ/ಪಹಣಿ/ವಿವಾದ/53/2014-15 ದಿನಾಂಕ 26/03/2016

ಉಪಸ್ಥಿತರು:- ಹೆಚ್. ವಿಶ್ವನಾಥ್ , ಹೂವಿನಹಡಗಲಿ.

| ವಾದಿಗಳು | ಪ್ರತಿವಾದಿಗಳು/ಎದುರುದಾರರು |
|---|---|
| 1) ಶ್ರೀಮತಿ ಹೆಚ್ ಎಂ ರತ್ನಮ್ಮ ಗಂಡ ಲೇಟ್ ವೀರಭದ್ರಯ್ಯ ದೇವಗೊಂಡನಹಳ್ಳಿ<br>3) ಶ್ರೀಮತಿ ಬಿ ಎಂ ಲಲಿತಮ್ಮ ತಂದೆ ಗುರುವಯ್ಯ ಸೊನ್ನ<br>(ಶ್ರೀ ಸುರೇಶ್, ವಕೀಲರು, ಹೂವಿನಹಡಗಲಿ) | ಶ್ರೀ ಡಿ ಹೆಚ್ ಎಂ ಸಣ್ಣಹಾಲಯ್ಯ ತಂದೆ ಸಣ್ಣವೀರಯ್ಯ ದೇವಗೊಂಡನಹಳ್ಳಿ |

ದಾವಾ ಜಮೀನಿನ ವಿವರ

| ಗ್ರಾಮ | ಸರ್ವೇ ನಂಬರ | ವಿಸ್ತೀರ್ಣ(ಎಕರೆ.ಸೆಂಟ್ಸ್) |
|---|---|---|
| ದೇವಗೊಂಡನಹಳ್ಳಿ | 393 ಬಿ | 2.037 |

ಪ್ರಸ್ತಾವನೆ:-

ಮೇಲಿನ ದಾವಾ ಜಮೀನನ್ನು ವಾದಿಯು ಕ್ರಯ ಪತ್ರ ಸಂಖ್ಯೆ 3037/2014-15 ದಿನಾಂಕ 31/12/2014 ರಂತೆ ಶ್ರೀಮತಿ ಹೆಚ್ ಎಂ ರತ್ನಮ್ಮ ಗಂಡ ಲೇಟ್ ವೀರಭದ್ರಯ್ಯ ದೇವಗೊಂಡನಹಳ್ಳಿ ರವರಿಂದ ಕ್ರಯಕ್ಕೆ ಪಡೆದಿರುತ್ತಾರೆ. ಈ ಹಿನ್ನಲೆಯಲ್ಲಿ ಜೆ ನಮೂನೆ ಪ್ರಕಾರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಾಲ 128ರ ಅನ್ವಯ ಹಕ್ಕು ಬದಲಾವಣೆ ಪ್ರಕ್ರಿಯೆಗೆ ಒಳಪಡಿಸಲಾಗಿ, ನಿಗಧಿತ ಅವಧಿಯೊಳಗೆ ಗ್ರಾಮದಲ್ಲಿ ಗ್ರಾಮಲೆಕ್ಕಾಧಿಕಾರಿಗಳು ದೇವಗೊಂಡನಹಳ್ಳಿ ರವರು ನಮೂನೆ 21ನ್ನು ಜಾರಿಮಾಡಿದಾಗ ದಿನಾಂಕ 17/01/2015ರಂತೆ ಪ್ರತಿವಾದಿಗಳಿಂದ ಲಿಖಿತ ಆಕ್ಷೇಪಣೆ ಸ್ವೀಕೃತವಾಗಿರುವುದರಿಂದ ಕಂದಾಯ ಪರಿವೀಕ್ಷಕರು ಹಡಗಲಿ ರವರು ಹಕ್ಕು ಬದಲಾವಣೆ ಹೆಚ್ 30/2014-2015 ದಿನಾಂಕ 01/01/2015ರ ಪ್ರಕಾರ ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ವಿಚಾರಣೆಗಾಗಿ ಈ ಕಾರ್ಯಾಲಯಕ್ಕೆ ಪ್ರಕರಣವನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕರ್ನಾಟಕ ಭೂ ಕಂದಾಯ ಕಾಯ್ದ 1964 ಕಾಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿ ಹಾಗೂ ಪ್ರತಿವಾದಿಗಳಗೆ ಕೇಳಿಕೊಳ್ಳಲು ಅವಕಾಶ ನೀಡಿ ದಿನಾಂಕ 16/02/2015 ರಿಂದ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ವಾದಿಯು ಹಾಗೂ ಅವರ ಪರ ನ್ಯಾಯವಾದಿಗಳು ಶ್ರೀಮತಿ ಹೆಚ್ ಎಂ ರತ್ನಮ್ಮ ಗಂಡ ಲೇಟ್ ವೀರಭದ್ರಯ್ಯ ದೇವಗೊಂಡನಹಳ್ಳಿ ರವರು ದೇವಗೊಂಡನಹಳ್ಳಿ ಗ್ರಾಮದ ಸರ್ವೇ ನಂಬರ 393 ಬಿ (ಎ) 2.037ಎಕರೆ ಜಮೀನನ್ನು ಶ್ರೀಮತಿ ಬಿ ಎಂ ಲಲಿತಮ್ಮ ತಂದೆ ಗುರುವಯ್ಯ ಸೊನ್ನ ರವರಿಂದ ಉಪನೊಂದಣಾಧಿಕಾರಿಗಳ ಹಡಗಲಿ ರವರಲ್ಲಿ ನೊಂದಣಿ ದಸ್ತಾವೇಜು ಸಂಖ್ಯೆ 3037/2014-15 ದಿನಾಂಕ 31/12/2014ರಲ್ಲಿ ಕ್ರಯಕ್ಕೆ ಪಡೆದಿರುತ್ತೇನೆ ಎಂದು ತಿಳಿಸಿ ಅದರಂತೆ ತನ್ನ ಹೆಸರಿಗೆ ಪಹಣಿಯಲ್ಲಿ ಹಕ್ಕು ಬದಲಾವಣೆ ಮಾಡಲು ಕೋರಿ ತಮ್ಮ ವಾದವನ್ನು ಹಾಗೂ

ತಕರಾರುದಾರರಿಗೂ ಈ ಜಮೀನಿಗೂ ಯಾವಿದೇ ರೀತಿಯ ಹಕ್ಕು ಇರುವುದಿಲ್ಲ, ಅವರು ವಿನಾ: ಕಾರಣ ನಮಗೆ ತೊಂದರೆ ನೀಡಬೇಕೆಂದು ಆಕ್ಷೇಪಣೆ ನೀಡಿರುತ್ತಾರೆ. ಅವರ ಮನವಿಯನ್ನು ತಿರಸ್ಕರಿಸುವಂತೆ ತಮ್ಮ ವಾದವನ್ನು ಮಂಡಿಸಿರುತ್ತಾರೆ.

ಪ್ರತಿವಾದಿಗಳಾದ ಶ್ರೀ ಡಿ ಹೆಚ್ ಎಂ ಸಣ್ಣಹಾಲಯ್ಯ ತಂದೆ ಸಣ್ಣವೀರಯ್ಯ ದೇವಗೊಂಡನಹಳ್ಳಿ ಇವರು ಸದರಿ ದಾವಾದ ಜಮೀನಿನಲ್ಲಿ 30 ರಿಂದ 40 ವರ್ಷಗಳಿಂದ ತಮ್ಮ ತಾಯಿಯ ಆಸ್ತಿಯಾಗಿದ್ದು ತಮಗೂ ಹಕ್ಕು ಇರುವುದಾಗಿ ತಕರಾರು ಸಲ್ಲಿಸಿರುತ್ತಾರೆ ಆದರೆ ಅವರಿಗೆ ಕೇಳಿಕೊಳ್ಳಲು ಹಲವಾರು ಬಾರಿ ಲಿಖಿತ ನೋಟಿಸ್ ನೀಡದರೂ ಅವರು ಈ ನ್ಯಾಯಾಲಯಕ್ಕೆ ಗೈರುಹಾಜರಾರುತ್ತಾರೆ, ಹಾಗೂ ಈ ಜಮೀನಿಗೆ ತಮ್ಮ ಕೋರಿಕೆಯಲ್ಲಿನ ಅಂಶಗಳಿಗೆ ಯಾವುದೆ ಪೂರಕ ದಾಖಲೆಗಳನ್ನು ನೀಡಿರುವುದಿಲ್ಲ.

ಈ ಪ್ರಕರಣದಲ್ಲಿ ವಾದಿಗಳ/ ಪ್ರತಿವಾದಿಗಳ ಹಾಗೂ ಅವರ ಪರ ನ್ಯಾಯವಾದಿಗಳ ವಾದವನ್ನು ಆಲಿಸಲಾಯಿತು. ಪ್ರತಿವಾದಿಗಳು ಶ್ರೀ ಹಾಲಪ್ಪ ತಂದೆ ಪಕ್ಕೀರಪ್ಪ ಉಪನಾಯಕನಹಳ್ಳಿ ರವರು ನೀಡಿರುವ ಮನವಿಯನ್ನು ತಿರಸ್ಕರಿಸಲು ಹಾಗೂ ವಾದಿಗಳಾದ ಶ್ರೀಮತಿ ಹುಲುಗಮ್ಮ ಗಂಡ ಮಾಗಳದ ನಾಗಪ್ಪ ಹೂವಿನಹಡಗಲಿ ರವರ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು ನೊಂದಾಯಿತ ಕ್ರಯ ಪತ್ರ ಪ್ರಕಾರ ನಮೂದಾಗಿರುವ ಹಕ್ಕು ಬದಲಾವಣೆ ತಿರಸ್ಕರಿಸಲು ಕೋರಿರುವುದು ಸಮಂಜಸ ಆಗಿರುವುದಿಲ್ಲ ಮತ್ತು ತಕರಾರುದಾರರು ವಿಚಾರಣೆಗೆ ಗೈರುಹಾಜರಾಗಿರುತ್ತಾರೆ. ಕಾರಣ ಪ್ರತಿವಾದಿಗಳ ಮನವಿಯನ್ನು ಪರಿಗಣಿಸಲು ಅವಕಾಶ ವಿಲ್ಲದ ಕಾರಣ ಮಾನ್ಯ ಉಚ್ಚನ್ಯಾಯಲಯ ಬೆಂಗಳೂರು ರವರ ರಿಟ್ ಪಿಟಿಕ್ಷನ್ ನಂಬರ್ 3685/1993 ಆದೇಶದನ್ವಯ ನೊಂದಣಿ ಪತ್ರವನ್ನು ರದ್ದು ಗೊಳಿಸಲು ಅಥವಾ ತಿರಸ್ಕರಿಸಲು ಈ ನ್ಯಾಯಾಲಯಕ್ಕೆ ಅಧಿಕಾರ ಇಲ್ಲದಿರುವುದರಿಂದ ಹಾಗೂ ಭೂ ಕಂದಾಯ ಕಾಯ್ದೆ ಅನ್ವಯ 1964 ಕಾಲಂ 128 ರನ್ವಯ ನೊಂದಣಿ ಪತ್ರದ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕಂದಾಯ ಅಧಿಕಾರಿಗಳ ಆದ್ಯ ಕರ್ತವ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನೋಂದಾಯಿತ ಕ್ರಯ ಪತ್ರ ಪ್ರಕಾರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಈ ಕೆಳಕಂಡ ಆದೇಶ.

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ ಹಿನ್ನೆಲೆ ಕಾರಣಗಳಿಂದಾಗಿ ನೊಂದಣಿ ಕ್ರಯಪತ್ರ ಸಂಖ್ಯೆ 3037/2014-15 ದಿನಾಂಕ 31/12/2014ರ ಪ್ರಕಾರ ವಾದಿಗಳಾದ ಶಿಶ್ರೀಮತಿ ಬಿ ಎಂ ಲಲಿತಮ್ಮ ತಂದೆ ಗುರುವಯ್ಯ ಸೊನ್ನರವರ ಹೆಸರಿಗೆ ದೇವಗೊಂಡನಹಳ್ಳಿ ಗ್ರಾಮದ ಸರ್ವೇ ನಂಬರ 393 ಬಿ (ವಿ) 2.037ಎಕರೆ ಜಮೀನನ್ನು ನೋಂದಾಯಿತ ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ. ಹಾಗೂ ಪ್ರತಿವಾದಿಗಳು ಬಾದಿತರಾದಲ್ಲಿ ತಮ್ಮ ಹಕ್ಕು ಮತ್ತು ಹಿತಾಸಕ್ತಿಯನ್ನು ಉನ್ನತ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಬಹುದಾಗಿದೆ.

ಈ ಆದೇಶವನ್ನು ಬೆರಳಚ್ಚು ಮಾಡಿಸಿ, ದಿನಾಂಕ 26/05/2016 ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

26/5/16

ತಹಶೀಲ್ದಾರರು
ಹೂವಿನಹಡಗಲಿ.

ಪ್ರತಿಗಳನ್ನು;

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.
2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.